ಸಿವಿಲ್ ನ್ಯಾಯಾಧೀಶರು ಮತ್ತು ಹೆ. ಪ್ರದನ್ಯಾದಂ.ರವರ ನ್ಯಾಯಾಲಯ, ತರೀಕೆರೆ.

ಸಿ.ಸಿ.ನಂ.409/2014.

ದಿನಾಂಕಃ01.12.2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಿ.ಡಬ್ಲ್ಯೂಃ 4 ಸಿ.ಡಬ್ಲ್ಯೂಃ 2

| | |
|---|---|
| ಸಾಕ್ಷಿಯ ಹೆಸರು | ಃ ಶ್ರೀಮತಿ ಲಕ್ಷ್ಮೀದೇವಿ |
| ಗಂಡನ ಹೆಸರು | ಃ ಎಂ ಶ್ರೀನಿವಾಸ್ |
| ವಯಸ್ಸು | ಃ 55 ವರ್ಷ |
| ಉದ್ಯೋಗ | ಃ ಸರ್ಕಾರಿ ಅಭಿಯೋಜಕರು, 1 ನೇ ಹೆಚ್ಚುವರಿ ಜಿಲ್ಲಾ ನ್ಯಾಯಾಲಯ |
| ವಾಸ | ಃ ಮೈಸೂರು |

**ಮುಖ್ಯ ವಿಚಾರಣೆಃ** ಮಾನ್ಯ ಸ ಸ ಅ ಅವರಿಂದಃ-

ಚಾಸಾ 1 ನನ್ನ ತಮ್ಮ.

23.01.2014 ರಂದು ನಾನು ಮತ್ತು ಚಾಸಾ 1 ರವರು ತಿಪಟೂರಿನ ಶಾರದ ನಗರ ರೈಲು ನಿಲ್ದಾಣದಲ್ಲಿ 2 ಟಿಕೇಟ್ ಗಳನ್ನು ತರೀಕೆರೆಗೆ ಖರೀದಿ ಮಾಡಿ ಬೆಂಗಳೂರು ಶಿವಮೊಗ್ಗ ಪ್ಯಾಸೆಂಜರ್ ರೈಲಿನಲ್ಲಿ ರಾತ್ರಿ 09.00 ಗಂಟೆಗೆ ಹೊರಟು ಸುಮಾರು 10.45 ರ ಸುಮಾರಿಗೆ ಶಿವಪುರ ರೈಲ್ವೆ ನಿಲ್ದಾಣದಲ್ಲಿ ನಿಲ್ಲಿಸಿ ಹೊರಡಲು ಆರಂಭವಾಗಿದ್ದು ನಿದಾನವಾಗಿ ಸದರಿ ರೈಲು ಚಲಿಸುತ್ತಿರುವಾಗ ಹಿಂದಿನಿಂದ 3 ನೇ ಬೋಗಿಯಲ್ಲಿ ಹಿಂದಿನ ಆಸನದ ಬಳಿ ನಾನು ಉದ್ದನೆಯ ಸೀಟಿನಲ್ಲಿ ಮಲಗಿದ್ದು ಚಾಸಾ 1 ರವರು ಎದುರುಗಡೆ ಕಿಟಕಿ ಬಳಿಯ ಆಸನದಲ್ಲಿ ಕುಳಿತ್ತಿದ್ದು ನಾನು ಕಿಟಕಿ ಕಡೆಗೆ ತಲೆ ಹಾಕಿ ಮಲಗಿದ್ದೆನು. ಸದರಿ ಬೋಗಿಯಲ್ಲಿ ನಾನು ಮತ್ತು ಚಾಸಾ 1 ರವರು ಮಾತ್ರ ಇದ್ದು ಸದರಿ ಆಸನದ ನಂತರ ಆಸನದಲ್ಲಿ 5-6 ಜನ ಕುಳಿತ್ತಿದ್ದರು. ಆ ಸಮಯದಲ್ಲಿ ರೈಲಿನಲ್ಲಿ ಇದ್ದ ಒಬ್ಬ ವ್ಯಕ್ತಿ ನನ್ನ ತಾಳಿಯ ಚೈನ್ ಅನ್ನು ಕಿತ್ತುಕೊಂಡು ಸದರಿ ಬೋಗಿಯ ಬಾಗಿಲಿನಿಂದ ಹೊರಗಡೆಗೆ ಓಡಿ ಹೋಗಿರುತ್ತಾನೆ. ಸದರಿ ತಾಳಿ ಚೈನ್ ಮಾತ್ರ ನಕಲಿ ಆಗಿದ್ದು ಅದಕ್ಕೆ ನಾನು 3 ಗ್ರಾಂ ತೂಕದ ಬಂಗಾರದ ಕಡ್ಡಿ ಮತ್ತು ಅದಕ್ಕೆ ಜೋಡಿಸಿದ 5 ಗ್ರಾಂ ತೂಕದ ಬಂಗಾರದ ತಾಳಿ ಹಾಗೂ 2 ಗ್ರಾಂ ತೂಕದ 2 ಗುಂಡುಗಳನ್ನು ಹಾಗೂ ತಲಾ 1 ಸಾವಿರ ಬೆಲೆ ಬಾಳುವ 2 ಹವಳ

ಹಾಕಿದ್ದೆನು. ಸದರಿ ನಕಲು ಚೈನಿಗೆ ನಾನು ಖರೀದಿ ಮಾಡುವ ಸಮಯದಲ್ಲಿ 3 ಗ್ರಾಂ ಬಂಗಾರದ ಲೇಪನವನ್ನು ಮಾಡಿದ್ದರು ಎಂದು ನನಗೆ ತಿಳಿಸಿದ್ದರು. ಆ ಸಮಯಕ್ಕೆ ಸದರಿ ಆಭರಣಗಳ ಮೌಲ್ಯ ಒಟ್ಟು 20 ಸಾವಿರಗಳಾಗಿರುತ್ತದೆ. ಆ ಸಮಯದಲ್ಲಿ ಕತ್ತಲಾಗಿದ್ದ ಕಾರಣ ಮತ್ತು ರೈಲು ಚಲಿಸುತ್ತಿದ್ದ ಕಾರಣ ಹಾಗೂ ನಾವು ಅವರನ್ನು ಹಿಂಬಾಲಿಸಿದರೆ ಅವರ ಜೊತೆ ಇರುವವರ ಬಗ್ಗೆ ನಮಗೆ ಯಾವುದೇ ಮಾಹಿತಿ ಇಲ್ಲದ ಕಾರಣ ಮತ್ತು ನಮಗೆ ಪೆಟ್ಟಾಗಬಹುದಾಗಿದ್ದ ಕಾರಣ ಅವನನ್ನು ಹಿಂಬಾಲಿಸಲಿಲ್ಲ. ನಾನು ಆ ಸಮಯದಲ್ಲಿ ಕೂಗಿಕೊಂಡಿದ್ದು ಆಗ ಚಾಸಾ 1 ರವರು ಮತ್ತು ಸದರಿ ಬೋಗಿಯಲ್ಲಿ ಇದ್ದ ಇತರೆ ಪ್ರಯಣಿಕರು ನನ್ನ ಬಳಿ ಬಂದಿದ್ದು ಅಷ್ಟರಲ್ಲಿ ರೈಲು ವೇಗವಾಗಿ ಚಲಿಸಲು ಆರಂಭ ಮಾಡಿತ್ತು. ಸದರಿ ರೈಲು ತರೀಕೆರೆ ರೈಲ್ವೆ ನಿಲ್ದಾಣಕ್ಕೆ ಬಂದಿದ್ದು ಸದರಿ ರೈಲ್ವೆ ನಿಲ್ದಾಣದಲ್ಲಿ ಇದ್ದ ಕಚೇರಿಯಲ್ಲಿ ಸದರಿ ಕಳ್ಳತನದ ಬಗ್ಗೆ ಮಾಹಿತಿ ನೀಡಿದಾಗ ಅವರು ನಮಗೆ ಶಿವಮೊಗ್ಗದಲ್ಲಿ ದೂರನ್ನು ನೀಡುವಂತೆ ತಿಳಿಸಿರುತ್ತಾರೆ.

ಚಾಸಾ 1 ರವರು ದಿಃ 02.02.2014 ರಂದು ದೂರನ್ನು ನೀಡಿರುತ್ತಾರೆ. ನನ್ನ ಗಂಡನಿಗೆ ಲೀವರ್ ಸಿರೋಸಿಸ್ ಕಾಯಿಲೆ ಇದ್ದ ಕಾರಣ ರಕ್ತ ವಾಂತಿಯಾಗುತ್ತಿದ್ದು ಆ ಕಡೆಗೆ ನಾವು ಗಮನಹರಿಸಬೇಕಾಗಿದ್ದ ಕಾರಣ ದೂರನ್ನು ಚಾಸಾ 1 ರವರಿಗೆ ನೀಡಲು ತಿಳಿಸಿರುತ್ತೇನೆ. ಹಾಗಾಗಿ ನಿಪಿ1 ನ್ನು ನೀಡುವಲ್ಲಿ ತಡವಾಗಿರುತ್ತದೆ.

08.03.2014 ರಲ್ಲಿ ಮೈಸೂರು ರೈಲ್ವೆ ಪೊಲೀಸರು ಚಾಸಾ 1 ರವರಿಗೆ ದೂರವಾಣಿ ಮಾಡಿ ನಮ್ಮ ಆಭರಣಗಳು ಮತ್ತು ಆರೋಪಿತರು ದೊರೆತ್ತಿದ್ದು ಅದನ್ನು ಗುರುತಿಸಲು ಶಿವಮೊಗ್ಗದ ರೈಲ್ವೆ ಪೊಲೀಸ್ ಠಾಣೆಗೆ ಹೋಗಲು ತಿಳಿಸಿದ್ದರು. ನಂತರ ಚಾಸಾ 1 ರವರು ಸದರಿ ವಿಚಾರವನ್ನು ನನಗೆ ತಿಳಿಸಿದ್ದು ದಿಃ 08.03.2014 ರಂದು ನಾನು ಮತ್ತು ಚಾಸಾ 1 ರವರು ಶಿವಮೊಗ್ಗದ ರೈಲ್ವೆ ಪೊಲೀಸ್ ಠಾಣೆಗೆ ಹಾಜರಾಗಿ 3 ನೇ ಆರೋಪಿಯನ್ನು ನೋಡಿ ಗುರುತಿಸಿರುತ್ತೇವೆ. ಮತ್ತು ನಮ್ಮ ಆಭರಣಗಳನ್ನು ತೋರಿಸಿದ್ದು ಅದನ್ನು ಸಹ ನೋಡಿ ಗುರುತಿಸಿರುತ್ತೇವೆ. ಆ ಬಗ್ಗೆ ನಾನು ನನ್ನ

ಹೇಳಿಕೆಯನ್ನುಸಹ ನೀಡಿರುತ್ತೇನೆ. ನಿಪಿ1 ರ ಜೊತೆಯಲ್ಲಿ ನಾವು ಖರೀದಿ ಮಾಡಿದ 2 ರೈಲ್ವೆ ಟೀಕೇಟ್ ಗಳನ್ನು ಹಾಜರು ಮಾಡಿದ್ದೆವು. ಸದರಿ ಟೀಕೇಟ್ ಗಳ ಸಂಖ್ಯೆ 03648 ಮತ್ತು 03649 ಆಗಿರುತ್ತದೆ.

ತಾಳಿ ಬೊಟ್ಟು ಹಾಗೂ ಕಡ್ಡಿ ಮಾತ್ರ ಆರೋಪಿತರಿಂದ ವಶಪಡಿಸಿಕೊಳ್ಳಲಾಗಿರುತ್ತದೆ ಎಂದು ನಮಗೆ ತೋರಿಸಿರುತ್ತಾರೆ.

ಸಾಕ್ಷಿಗೆ ಈಗ ಬಂಗಾರದ ಒಂದು ತಾಳಿ ಬೊಟ್ಟು ಹಾಗೂ ಬಂಗಾರದ ಕಡ್ಡಿತೋರಿಸಲಾಗಿ ನೋಡಿ ಗುರುತಿಸಿರುತ್ತಾರೆ. ಅವುಗಳನ್ನು ಈಗಾಗಲೇ ಒಟ್ಟಾಗಿ ಮು ಮಾ 1 ಎಂದು ಗುರುತಿಸಲಾಗಿರುತ್ತದೆ.

ನಾನು 3 ನೇ ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. 3 ನೇ ಆರೋಪಿಯು ಈ ದಿನ ಗೈರುಹಾಜರಾಗಿದ್ದು, ಆತನ ಗುರುತಿಸುವಿಕೆಯ ಬಗ್ಗೆ ತಮ್ಮ ತಕರಾರು ಇರುವುದಿಲ್ಲ ಎಂದು ಆತನ ಪರವಾಗಿನ ವಕೀಲರು ತಿಳಿಸಿರುತ್ತಾರೆ.

ನಿಪಿ2 ಮತ್ತು 3 ನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ.

<u>ಪಾಟೀಸವಾಲುಃ</u> 3 ನೇ ಆರೋಪಿಯ ಪರ ವಕೀಲರಿಂದಃ-

ನನ್ನ ಜೊತೆ ಆ ದಿನ ಪ್ರಯಾಣ ಮಾಡುತ್ತಿದ್ದ ಪ್ರಯಾಣಿಕರ ಹೆಸರನ್ನು ನನಗೆ ಹೇಳಲು ಅಗುವುದಿಲ್ಲ. ಸದರಿ ಆಸನವು ಎದುರು ಬದುರು ಜನರು ಕುಳಿತುಕೊಳ್ಳುವ ಆಸನ ಆಗಿರುತ್ತದೆ. ದಿಃ 08.03.2014 ರಂದು ನಾನು ನನ್ನ ಹೇಳಿಕೆಯನ್ನು ನೀಡಿರುತ್ತೇನೆ. ನನ್ನ ಗಂಡ ಸದರಿ ತಾಳಿಯನ್ನು ನೀಡಿದ್ದು ಅವರು ಹಾಸನದಲ್ಲಿ ಖರೀದಿ ಮಾಡಿರುತ್ತಾರೆ. ನಾನು ಸದರಿ ಗೋಲ್ಡ್ ಕವರಿಂಗ್ ಮಾಡಿದ್ದ ಚೈನ್ ಅನ್ನು ಖರೀದಿ ಮಾಡಿದ ಬಗ್ಗೆ ಯಾವುದೇ ಬಿಲ್ ನನ್ನ ಬಳಿ ಇಲ್ಲ. ಶಿವಪುರದಿಂದ ತರೀಕೆರೆ ಸುಮಾರು 15 ನಿಮಿಷಗಳಲ್ಲಿ ರೈಲಿನಲ್ಲಿ ತಲುಪಬಹುದು. ಶಿವಪುರದ ನಂತರ ಕೊರನಹಳ್ಳಿ ನಿಲ್ದಾಣ ಬರುತ್ತದೆ ಎಂದರೆ ಸಾಕ್ಷಿ ನಾನು ಆ ಗಾಬರಿಯಲ್ಲಿ ಗಮನಿಸಲಿಲ್ಲ ಎಂದು ನುಡಿಯುತ್ತಾರೆ. ಶಿವಪುರದಿಂದ ತರೀಕೆರೆ ತಲುಪಲು ಸದರಿ ರೈಲು ಅರ್ಧ ಗಂಟೆ ಬೇಕಾಗುತ್ತದೆ ಎಂದರೆ ಸಾಕ್ಷಿ ಮೊದಲು ನಿದಾನ ಬಂದ ಕಾರಣ ಆ ಸಮಯದಲ್ಲಿ ಸದರಿ

ರೈಲು ವೇಗವಾಗಿ ಹೋಗುತ್ತಿರುತ್ತದೆ ಎಂದು ನುಡಿಯುತ್ತಾರೆ. ನಾನು ಬೇರೆ ಪ್ರಯಾಣಿಕರಿಗೆ ತೊಂದರೆ ಆಗಬಾರದೆಂದು ಹಾಗೂ ಕತ್ತಲೆ ಸಮಯವಾದ ಕಾರಣ ಸದರಿ ರೈಲಿನ ಚೈನ್ ಅನ್ನು ಎಳೆದು ನಿಲ್ಲಿಸಲು ಪ್ರಯತ್ನ ಮಾಡಲಿಲ್ಲ. ಆ ರೀತಿ ನಾನು ಯಾವುದೇ ಹೇಳಿಕೆ ನೀಡಿರುವುದಿಲ್ಲ. ತರೀಕೆರೆ ನಿಲ್ದಾಣ ಹತ್ತಿರ ಇದ್ದ ಕಾರಣ ನಾನು ಯಾವುದೇ ಸಹಾಯವಾಣಿಗೆ ಅಥವಾ ಪೊಲೀಸರಿಗೆ ದೂರವಾಣಿ ಮಾಡಲಿಲ್ಲ. ತರೀಕೆರೆ ರೈಲ್ವೆ ನಿಲ್ದಾಣದಲ್ಲಿ ನಾನು ವಿಷಯವನ್ನು ತಿಳಿಸಿದ್ದು ಅವರು ನನಗೆ ಶಿವಮೊಗ್ಗದಲ್ಲಿ ದೂರನ್ನು ನೀಡುವಂತೆ ತಿಳಿಸಿದ್ದರು. ನಾನು ತರೀಕೆರೆ ರೈಲ್ವೆ ನಿಲ್ದಾಣದಲ್ಲಿ ಮೌಖಿಕವಾಗಿ ವಿಚಾರಿಸಿರುತ್ತೇನೆ. ಯಾವುದೇ ಕೃತ್ಯ ನಡೆಯದ ಕಾರಣ ನಾನು ಲಿಖಿತವಾಗಿ ವಿಚಾರಣೆ ಮಾಡಲಿಲ್ಲ ಎಂದರೆ ಸರಿಯಲ್ಲ. ನಾನು ಆ ಸಮಯದಲ್ಲಿ ನಿದ್ದೆ ಮಾಡುತ್ತಿರಲಿಲ್ಲ, ಸುಮ್ಮನೆ ಕಣ್ಣು ಮುಚ್ಚಿ ಮಲಗಿದ್ದೆ ಎಂದು ನುಡಿಯುತ್ತಾರೆ.

ನಾನು 08.03.2014 ರಂದು ಶಿವಮೊಗ್ಗ ರೈಲ್ವೆ ಠಾಣೆಗೆ ಹಾಜರಾಗಿ ಆರೋಪಿಯನ್ನು ಮತ್ತು ಮು ಮಾ 1 ನ್ನು ಗುರುತಿಸಿರುತ್ತೇನೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಸುಳ್ಳು ದೂರನ್ನು ದಾಖಲಿಸಿ ಆರೋಪಿತರ ವಿರುದ್ದ ಸುಳ್ಳು ಸಾಕ್ಷವನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

<u>ಪಾಟೀಸವಾಲುಃ</u> 1 ಮತ್ತು 2 ನೇ ಆರೋಪಿತರ ಪರ ವಕೀಲರಿಂದಃ-

ಯಾವುದೇ ಪಾಟೀ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.

<u>ಮರು ವಿಚಾರಣೆ</u> ಃ ಇಲ್ಲ

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಎ ಒ,

(ಸಂತೋಷ್ ಕುಮಾರ್ ಪಿ.ಎಸ್.)
ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿ, ತರೀಕೆರೆ.